"ಆಯ್ತು, ಅದೊಂದು ಮೂರು ದಿನ ವಿಧಿ ಇಲ್ದೆ ನಾವೇ ಕಷ್ಟಪಡ್ಬೇಕಾಗುತ್ತೆ. ಎಲ್ಲಾ ಸರಿಯಾಗಿರೋರು ಸಿಕ್ಕು ಅಂದ್ರೆ ಎಲ್ಲಿಂದ ತಲಾಷು ಮಾಡೋದು? ಕೈ ಬಿಚ್ಚಿ ದುಡ್ಡು ಕೊಟ್ರೂ ಜನಕ್ಕೆ ಬರಗಾಲ..."

"..."

"ಹೆಂಗೋ ಪಥ ನಡೀತಿತ್ತು. ಈಗ ವಿಧಿ ಇಲ್ಲ ಅಂತಾಗಿದೆ ಮಾರಾಯ್ತೀ. ಮನೇಲಿ ಮದುವೆ ಇಟ್ಗಂಡು ನಾವು ಮುದುಕಿ ಚಾಕರಿ ಮಾಡ್ತಾ ಕೂತಿರೋಕಾಗುತ್ತಾ? ನಮ್ದೇ ನಮಗೆ ಏಳೂಹನ್ನೊಂದು ಆಗಿರುತ್ತೆ."

"ಯೋಚ್ನೆ ಮಾಡ್ಬೇಡಿ. ನಾನು ಅಜ್ಜಮ್ಮನ್ನ ನೋಡ್ಕಂತೀನಿ..."

"ಅಷ್ಟು ಮಾಡು ಮಾರಾಯ್ತೀ. ದೊಡ್ಡ ಹೊರೆ ಕಮ್ಮಿಯಾಗುತ್ತೆ. ಪೇಟೆ ಊರಾದ್ರೆ ಹಿಂಗಿದ್ದಕ್ಕೆಲ್ಲಾ ಜನ ಸಿಕ್ತಾರಂತೆ. ದುಡ್ಡಿನ ಮಕ ನೋಡ್ಡಿದ್ರೆ ತಲೆಬಿಸೀನೇ ಇಲ್ವಂತೆ. ಈ ಹಳ್ಳಿಮೂಲೇಲಿ ಯಾರು ಸಿಕ್ತಾರೆ ಹೇಳು. ನಮ್ಮ ತಲೆಗೆ ನಮ್ದೇ ಕೈ..."

ಯಾರೋ ಹೇಳಿ, ಯಾರೋ ಕೇಳಿ, ಮನೆಮಗಳಿಗೆ ಗಂಡು ಗೊತ್ತಾಗುತ್ತಿದ್ದಂತೆ ಆರಂಭವಾಗಿದ್ದ ವ್ಯವಹಾರ ಇದೀಗ ಫಲ ಕೊಟ್ಟಿತ್ತು. ಚಂಪಾ ಕೈಚೀಲ ಹಿಡಿದು ಅಣ್ಣನೊಡನೆ ಆ ದೊಡ್ಡ ಮನೆಯೊಳಗೆ ಪ್ರವೇಶ ಮಾಡಿದ್ದಳು. ಹೀಗೆ ಯಾರದ್ದೋ ಮನೆಯಲ್ಲಿ ಕಾಯಂ ಆಗಿ ಇದ್ದುಕೊಂಡು ಕೆಲಸ ಮಾಡಿ ಅಭ್ಯಾಸ ಇದ್ದವಳಲ್ಲ ಚಂಪಾ. ಅಣ್ಣ ಅದೆಷ್ಟು ದುಡ್ಡಿಗೆ ವ್ಯವಹಾರ ಕುದುರಿಸಿದ್ದಾನೋ ಅವಳಿಗೆ ಗೊತ್ತಿಲ್ಲ. ಆದರೆ ಆ ಹಣ ಸಣ್ಣ ಮೊತ್ತದ್ದಾಗಿರಲಿಕ್ಕಿಲ್ಲ ಎನ್ನುವ ಅಂದಾಜು ಅವಳಿಗುಂಟು. ಅದಕ್ಕೆ ಅವಳದೇ ಆದ ಸಕಾರಣ ಕೂಡಾ ಇದೆ. ಯಾವತ್ತೂ ಮುಖ ದಪ್ಪ ಮಾಡಿಕೊಂಡಿರುತ್ತಿದ್ದ ಅತ್ತಿಗೆ ನಾದಿನಿಯನ್ನು ಬೀಳ್ಕೊಡುವ ದಿನ ಹತ್ತಿರ ಬಂದಾಗ ಅವಳೊಡನೆ ವಿಶ್ವಾಸದ ಎರಡು ಮಾತಾಡುವಷ್ಟು ಸಡಿಲಾಗಿದ್ದಳು. 'ಬೇಡ...' ಅಂದರೂ ಚಂಪನ ಕೈಚೀಲಕ್ಕೆ ತಾನು ದಿನಬಳಕೆಗೆ ಉಡುತ್ತಿದ್ದ ಎರಡು ಸೀರೆ ಸೇರಿಸಿ ಕಣ್ಣು ಒದ್ದೆಯಾಗಿಸಿಕೊಂಡಿದ್ದಳು ಅತ್ತಿಗೆ.

"ತುತ್ತು ಅನ್ನ ಹಾಕೋ ಯೋಗ್ತಿ ಇಲ್ದೆ ನಿನ್ನ ಕಂಡೋರ ಮನೆಗೆ ದೂಕ್ತಿದೀವಿ ಅಂತ ಅಂದ್ಕಂಬೇಡ ಕಣೇ. ನಮ್ಮನೆ ಪರಿಸ್ಥಿತಿ ನಿಂಗೆ ಗೊತ್ತೇ ಇದೆ. ಕಾಯಿಲೆಕಸಾಲೆಯವ್ರನ್ನ ನೋಡ್ಕಳ್ಳೋದು ಅಭ್ಯಾಸ ಆಯ್ತೂಂದ್ರೆ ಅದೇ ಮುಂದೆ ಹೊಟ್ಟೆಪಾಡಿಗೆ ದಾರಿ ಆಗುತ್ತೆ ಅಂತಾರೆ ನಿನ್ನಣ್ಣ. ಎಲ್ಲಾ ವಿಚಾರ್ಸಿದಾರೆ. ಒಳ್ಳೇ ಮನೆತನ ಅಂತೆ. ಜನ ಒಳ್ಳೆಯೋರಂತೆ..."

ಅತ್ತಿಗೆ ತನ್ನಷ್ಟುದ್ದಕ್ಕೆ ಮಾತಾಡುತ್ತಿರುವುದನ್ನು ಕೇಳಿ ವಿಷಾದದ ನಗುವೊಂದು ಚಂಪನ ತುಟಿಯಂಚಿನಲ್ಲಿ ಮೂಡಿ ಮರೆಯಾಗಿತ್ತು. ಹಾಸಿಗೆ ಹಿಡಿದ ಮುದುಕಿಯ ಸೇವೆ ಮಾಡಲು ಅವರಿಗೊಂದು ಜನ ಬೇಕು. 'ಬೇಡ' ಅನಿಸಿದರೆ ಕಳಚಿಕೊಳ್ಳುವುದಕ್ಕೆ ಯಾವ ಅಡ್ಡ ಬೇಲಿಯೂ ಇಲ್ಲ. ನೋಡೋಣ, ಅತ್ತಿಗೆ ಹೇಳುವ ಮಾತಲ್ಲೂ ಸತ್ಯಾಂಶ ಇದೆ. ಎಷ್ಟು ದಿನ ಹಂಗಿನ ಕೂಳಿಗೆ ಜೋತುಕೊಂಡಿರಬೇಕು? ತನ್ನ ವಿದ್ಯೆಗೆ, ಬುದ್ಧಿಗೆ ಇದಕ್ಕಿಂತಾ ಇನ್ನಾವ ಕೆಲಸ ಸಿಗುತ್ತದೆ? ಕೂಲಿ ತೆಗೆದುಕೊಂಡರೇನಂತೆ, ಇದೂ ಒಂದು ಥರದ ಸೇವೆ. ವಯಸ್ಸಾದವರ ಸೇವೆ ಮಾಡಿದರೆ ಪಾಪ ಬರುವುದಿಲ್ಲ. ಈ ಹೆಳೆಯಲ್ಲಾದರೂ ಒಂದಿಷ್ಟು ಪುಣ್ಯದ ಗಂಟು ಕಟ್ಟಿಕೊಳ್ಳಬಹುದಾದರೆ ಮುಂದಿನ ಜನ್ಮಕ್ಕೆ ಬುತ್ತಿ ಆಗಬಹುದು. ಹೊಯ್ದಾಡುತ್ತಿದ್ದ ಮನಸ್ಸನ್ನು ಹತೋಟಿಗೆ ತಂದುಕೊಂಡಿದ್ದಳು ಚಂಪಾ. ಅಣ್ಣನ ಪ್ರಸ್ತಾವನೆಗೆ ಒಪ್ಪಿಕೊಂಡಿದ್ದಳು, ಒಳಗೊಳಗೆ ಕೊಂಚ ಅಳುಕೆಂಬುದು ಕಾಡುತ್ತಿದ್ದರೂ...

★★★

ನಿಧಾನಕ್ಕೆ ಅಪರಿಚಿತ ಜನ, ಅಪರಿಚಿತ ಪರಿಸರ ಚಂಪನಿಗೆ ಬಳಕೆಯಾಗತೊಡಗಿತು. ವಾಸ್ತವವಾಗಿ ಹಾಸಿಗೆ ಹಿಡಿದ ಮನೆಯ ಹಿರಿಜೀವವನ್ನು ನೋಡಿಕೊಳ್ಳಬೇಕಾದ್ದಷ್ಟೇ ಅವಳ ಕೆಲಸ.